4. ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಶುದ್ಧವಾದ ಕುಡಿಯುವ ನೀರು ಸರಬರಾಜು

ಶ್ರೀ ಡಿ. ಆರ್. ಪಾಟೀಲ್:– "ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಯ ವಿಷಯ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ. ಈ ವ್ಯವಸ್ಥೆ ಸುಧಾರಿಸಲು ಕೊಳವೆ ಭಾವಿಗಳನ್ನು ಹಾಕಲಾಗಿತ್ತು. ಆದರೆ, ನಂತರ ಈ ಕುಡಿಯುವ ನೀರೂ ಸಹ ಫ್ಲೋರೈಡ್ ಮಿಶ್ರಿತ ನೀರು ಎಂದು ಗೊತ್ತಾಗಿದೆ. ತಿಮ್ಮಾಪುರ ಗ್ರಾಮದ ನಾಗರೀಕರಿಗೆ ಪ್ರತಿನಿತ್ಯ ಫ್ಲೋರೈಡ್ ಇಲ್ಲದ ಶುದ್ಧ ಹಾಗೂ ಸಮರ್ಪಕ ಕುಡಿಯುವ ನೀರು ಪೂರೈಕೆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಹೇಳಿಕೆ ಬಯಸುತ್ತೇನೆ."

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೇ, ನೀರಿನಲ್ಲಿ ಫ್ಲೋರೈಡ್ ಇರುವುದು ನಮಗೆ ಗೊತ್ತಿದೆ. ಲಕ್ಕುಂಡಿ ಹಳ್ಳಿಯು ತಿಮ್ಮಾಪುರದಿಂದ 12 ಕಿ.ಮೀ. ದೂರದಲ್ಲಿದೆ. ಅಲ್ಲಿ ನೀರು ಹುಡುಕುತ್ತಾ ಇದ್ದಾರೆ. ಆಲ್ಲಿ ಪೋರ್ಟೆಬಲ್ ವಾಟರ್ ಸಿಕ್ಕರೆ 4 ಕಿ.ಮೀ. ರೈಸ್ ಮಾಡಿ, ನೀರಿನ ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಆರು ತಿಂಗಳಲ್ಲಿ ಪೂರೈಸುತ್ತೇವೆ.

5. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಸುವ್ಯವಸ್ಥಿತವಾಗಿ ಮುಂದುವರಿಯುವ ಬಗ್ಗೆ–

ಶ್ರಿ ಬಿ. ಎಂ. ಇವಿನಬ್ಬ (ಉಳ್ಳಾಲ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಸ್ಥಾಪನೆಯಾಗಿ ಸುಮಾರು 22 ವರ್ಷಗಳಾಯಿತು. ಆದು ಈವರೆಗೂ ಲಾಭ ಗಳಿಸಿಲ್ಲ. ಈ ನಿಗಮಕ್ಕೆ ನಾನಾ ಅಭಿವೃದ್ಧಿಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರ ಹಣ ಒದಗಿಸಿದೆ. ಆದು ಎಷ್ಟೆಂಬುದನ್ನು ತಿಳಿಸಬೇಕು. ಈಗ ನಿಗಮದ ಪರಿಸ್ಥಿತಿ ಏನು ಚೆನ್ನಾಗಿಲ್ಲ. ನಿಗಮ ಮುಂದುವರಿಯಲು ಸಾಧ್ಯವಿಲ್ಲವೆ ? ಹಾಗಾದಲ್ಲಿ ಮುಂದಿನ ವ್ಯವಸ್ಥೆ ಏನು ? ಅಲ್ಲಿರುವ ನೌಕರರ ಗತಿ ಏನು ? ಬದಲಿ ವ್ಯವಸ್ಥೆ ಏನಾದರೂ ಮಾಡಲಾಗುವುದೆ ? ಈ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳೇನು ? ಆದರ ಕೂಲಂಕುಶ ತನಿಖೆ ಮಾಡಲಾಗುವುದೆ ? ಮೀನುಗಾರರ ಹಿತಕ್ಕಾಗಿ ಸ್ಥಾಪನೆಗೊಂಡ ಈ ನಿಗಮ ಸುವ್ಯವಸ್ಥಿತವಾಗಿ ಮುಂದುವರಿಯಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವುದು ಅವಶ್ಯಕವಾಗಿರುತ್ತದೆ. ಈ ಕುರಿತು ಮೀನುಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಸಂತ ಪಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇದು 1971ರಂದು ಭಾರತ ಸರ್ಕಾರದ ಕಂಪನಿಗಳ ಕಾಯ್ದೆಯನ್ವಯ ನೋಂದಣಿಯಾಯಿತು.

ಈ ನಿಗಮದ, ಅಧಿಕೃತ ಷೇರು ಬಂಡವಾಳ ರೂ. 3.00 ಕೋಟಿ. ಈ ನಿಗಮಕ್ಕೆ ಸರ್ಕಾರವು ಇದುವರೆಗೆ ಒಂದು ಕೋಟಿ ಹದಿನೈದು ಲಕ್ಷ ರೂಪಾಯಿಗಳನ್ನು ಷೇರು ಬಂಡವಾಳವಾಗಿ ಕೊಟ್ಟಿದೆ. ಮಿಕ್ಕ ಒಂದು ಕೋಟಿ ಹತ್ತು ಲಕ್ಷ ರೂಪಾಯಿಗಳನ್ನು ಮೀನುಗಾರಿಕೆ ಇಲಾಖೆ ನಿರ್ಮಿಸಿದ ಸ್ಥಿರಾಸ್ತಿ ರೂಪದಲ್ಲಿ ವರ್ಗಾಯಿಸಲಾಗಿದೆ. ಭಾರತ ಸರ್ಕಾರವು ಈ ನಿಗಮಕ್ಕೆ ರೂ. 64.50 ಲಕ್ಷಗಳನ್ನು ಕೊಟ್ಟಿದೆ. ಈ ನಿಗಮದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಇದಕ್ಕೆ ಕಾರಣಗಳೇನೆಂದರೆ – ಹಳೆಯದಾದ ಯಂತ್ರೋಪಕರಣಗಳು, ಕಡಿಮೆ ಉತ್ಪಾದನೆ, ಹೆಚ್ಚಿನ ನಿರ್ವಹಣಾ ಮತ್ತು ಸಿಬ್ಬಂದಿ

ವೆಚ್ಚ. ಮೀನು ಮಾರಾಟದಲ್ಲಿ ಖಾಸಗಿಯವರಿಂದ ಹೆಚ್ಚಿನ ಸ್ಪರ್ಧೆ. ಕರಾವಳಿ ಮೀನು ಉತ್ಪಾದನೆಯಲ್ಲಿ ಏರುಪೇರು.

ಈ ನಿಗಮದ ಮಾಸಿಕ ಆದಾಯ ರೂ. 11.00 ಲಕ್ಷ. ಆದರೆ ಮಾಸಿಕ ಖರ್ಚು ರೂ. 17.00 ಲಕ್ಷ. ಈ ಖರ್ಚನ್ನು ಕಡಿಮೆ ಮಾಡಲು, ಆಡಳಿತ ಮಂಡಳಿಯು ಈಗಾಗಲೇ ತದಡಿ ಮತ್ತು ಕುಳಾಯಿ ಮಂಜುಗಡ್ಡೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಕ್ರಮವಾಗಿ ರೂ. 16.00ಲಕ್ಷ ಮತ್ತು ರೂ. 12.50 ಲಕ್ಷಕ್ಕೆ ಗುತ್ತಿಗೆ ರೂಪದಲ್ಲಿ ಕೊಟ್ಟಿದೆ. ನಿಗಮವು ಉಳ್ಳಾಲ ಮಂಜುಗಡ್ಡೆ ಕಾರ್ಖಾನೆಯನ್ನೂ ಕೂಡ ರೂ. 4.02 ಲಕ್ಷಗಳಿಗೆ ಗುತ್ತಿಗೆಗೆ ಕೊಡಲು ನಿರ್ಧರಿಸಿದೆ. ಈ ನಿಗಮದಲ್ಲಿ ಒಟ್ಟು 325 ಖಾಯಂ ಮತ್ತು ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರನ್ನು ಈ ನಿಗಮದಲ್ಲಿ ಮುಂದುವರೆಸಲಾಗುವುದು.

ಕರ್ನಾಟಕ ರಾಜ್ಯ ಮಹಾಲೇಖಪಾಲರು, ಬೆಂಗಳೂರು ಇವರು ಈ ನಿಗಮದ ಲೆಕ್ಕ ಪರಿಶೋಧನಾ ಕಾರ್ಯವನ್ನು 1985ರಿಂದ 1989ರ ತನಕ ಮಾಡುವಾಗ ಕೆಲವು ಅಕ್ರಮಗಳು ನಡೆದಿರುವುದಾಗಿ ತಿಳಿಸಿದ್ದಾರೆ. ಇವುಗಳನ್ನು ಸರ್ಕಾರವು ಪರಿಶೀಲಿಸಿ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಈ ನಿಗಮವು ಸುಸೂತ್ರವಾಗಿ ನಡೆಯಬೇಕೆಂದು ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಒಪ್ಪಿ ಇದರ ಬಗ್ಗೆ ಸೂಕ್ತ ಯೋಜನೆಯನ್ನು ಹಾಕಿಕೊಳ್ಳಲಾಗುವುದು.

6. ಚಿಕ್ಕಮಗಳೂರು ಜಿಲ್ಲಾಪರಿಷತ್ತಿಗೆ ನೀರು ಸರಬರಾಜಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 1992–93ರ ಸಾಲಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಮತ್ತು ತ್ವರಿತ ನೀರು ಸರಬರಾಜು ಯೋಜನೆಯಲ್ಲಿ ಲೆಕ್ಕ ಶೀರ್ಷಿಕೆ ಸಂಖ್ಯೆ 2215 ಒಟ್ಟು 50 ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನವು ಜಿಲ್ಲಾ ಪರಿಷತ್ (ಚಿಕ್ಕಮಗಳೂರಿಗೆ) ಅಗತ್ಯವಿದ್ದು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಪ್ರೊ ಬಿ. ಎಂ. ಇದಿನಬ್ಬರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–

ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತೊಂದರೆ ಉಂಟಾಗಿದ್ದು ನಿಜ. 1992–93ನೇ ಸಾಲಿನಲ್ಲಿ ರೂ. 99 ಲಕ್ಷ ಅಲೊಕೇಷನ್. ಆದರಲ್ಲಿ 66 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇನ್ನು ರೂ. 33 ಲಕ್ಷ ಬಿಡುಗಡೆಯಾಗಬೇಕಾಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಗೌವರ್ನಮೆಂಟ್ ಆಫ್ ಇಂಡಿಯಾದಿಂದ 31 ಕೋಟಿ ಏನು ಇದೆ. ಆದರಲ್ಲಿ 22 ಕೋಟಿ ರೂಪಾಯಿಗಳು ಬಂದಿದೆ. ಆದ್ದರಿಂದ ಈ ಜಿಲ್ಲೆಗೆ ತೊಂದರೆಯಾಗಿದೆ. ಈ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

7. ವಿದೇಶಗಳಲ್ಲಿ ಉದ್ಯೋಗ ದೊರಕಿಸಿಕೊಂಡ ರಾಜ್ಯ ಸರ್ಕಾರದ ನೌಕರರಿಗೆ ವೇತನ ಸಹಿತ ರಜೆ ಮಂಜೂರು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):– ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಕಛೇರಿಗಳಲ್ಲಿ